# ಕ್ರೋಮ್‌–ಫೈರ್‌ಫಾಕ್ಸ್ ಇದು ಅಪ್‌ಡೇಟ್ ಸಮಯ

■ ಶಶಿಕುಮಾರ್ ಸಿ.

ಕ್ರೋಮ್ ಮತ್ತು ಮೊಜಿಲ್ಲಾ ಫೈರ್‌ಫಾಕ್ಸ್‌ನಲ್ಲಿ ಭದ್ರತಾಲೋಪ ಕಾಣಿಸಿಕೊಂಡಿದ್ದು, ಆ ಸಮಸ್ಯೆಯನ್ನು ಪರಿಹರಿಸಲಿಕ್ಕಾಗಿ ಇತ್ತೀಚಿನ ವರ್ಷನ್‌ಗೆ ಕೂಡಲೇ ಅಪ್‌ಡೇಟ್ ಮಾಡಿಕೊಳ್ಳುವಂತೆ 'ಭಾರತ ಕಂಪ್ಯೂಟರ್ ತುರ್ತು ಪ್ರತಿಕ್ರಿಯಾ ತಂಡ' (ಸಿಇಆರ್‌ಟಿ–ಇನ್) ಎಚ್ಚರಿಕೆ ನೀಡಿದೆ. ವೆಬ್‌ಬ್ರೌಸರ್‌ಗಳನ್ನು ಅಪ್‌ಡೇಟ್ ಮಾಡದಿದ್ದರೆ ಬಳಕೆದಾರರ ಮಾಹಿತಿ ಕದಿಯಲು ಹ್ಯಾಕರ್‌ಗಳಿಗೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ ಎಂಬುದು ತಂಡದ ಮಾತು.

'ಕ್ರೋಮ್ ಮತ್ತು ಮೊಜಿಲ್ಲಾ ಫೈರ್‌ಫಾಕ್ಸ್ ಬ್ರೌಸರ್‌ಗಳಲ್ಲಿ ತಾಂತ್ರಿಕ ನ್ಯೂನತೆಗಳು ಪತ್ತೆಯಾಗಿವೆ. ಆ ನ್ಯೂನತೆಗಳನ್ನು ಬಳಸಿಕೊಂಡು ಹ್ಯಾಕರ್‌ಗಳು ಬಳಕೆದಾರರ ಡೇಟಾಗೆ ಸುಲಭವಾಗಿ ಪ್ರವೇಶ ಪಡೆಯುವ ಸಾಧ್ಯತೆ ಇದೆ. ಇದಕ್ಕೆ ಅವಕಾಶ ಮಾಡಿಕೊಡದಿರಲು ಬಳಕೆದಾರರು ವೆಬ್‌ಬ್ರೌಸರ್‌ಗಳನ್ನು ಅಪ್‌ಡೇಟ್ ಮಾಡುವುದು ಅತ್ಯಗತ್ಯ. ಎಲ್ಲ ಭದ್ರತಾ ಕಾರ್ಯವಿಧಾನಗಳನ್ನು ಬೈಪಾಸ್ ಮಾಡುವ ಮೂಲಕ ಅನಿಯಂತ್ರಿಕ ಕೋಡ್‌ಗಳನ್ನು ಸಹ ಕಾರ್ಯಗತಗೊಳಿಸುತ್ತಿವೆ' ಎಂಬ ಮಾಹಿತಿಯನ್ನು ಈ ತಂಡವು ಹಂಚಿಕೊಂಡಿದೆ.

ಗೂಗಲ್ ಕ್ರೋಮ್‌ನ ವಿವಿಧ ವರ್ಷನ್‌ಗಳ 'ಸಿವಿಇ–2021–43527, ಸಿವಿಇ–20221489, ಸಿವಿಇ–2022–1633, ಸಿವಿಇ–202–1636, ಸಿವಿಇ–2022–1859, ಸಿವಿಇ–2022–1867 ಮತ್ತು ಸಿ20' ತಾಂತ್ರಿಕ ವಿಭಾಗಗಳಲ್ಲಿ ದೋಷಗಳು ಕಂಡು ಬಂದಿದ್ದು, ಇದನ್ನು ಗೂಗಲ್ ಕಂಪನಿಯೂ ಒಪ್ಪಿಕೊಂಡಿದೆ. ಅಲ್ಲದೇ ತನ್ನ ಈಚೆಗಿನ ಹೊಸ ಅಪ್‌ಡೇಟ್‌ನಲ್ಲಿ ಈ ಸಮಸ್ಯೆಗಳನ್ನು ಪರಿಹರಿಸಿದೆ.

ಮೊಜಿಲ್ಲಾ ಫೈರ್‌ಫಾಕ್ಸ್ 101ರ ಮೊದಲಿನ, ಐಒಸ್ ಆವೃತ್ತಿಯ 91.10ಕ್ಕಿಂತ ಮೊದಲಿನ, ಥಂಡರ್‌ಬರ್ಡ್ ಆವೃತ್ತಿ, ಇಎಸ್‌ಆರ್ 91.10ಕ್ಕಿಂತ ಮೊದಲಿನ ವರ್ಷನ್‌ಗಳಲ್ಲಿ ತಾಂತ್ರಿಕ ದೋಷಗಳು ಪತ್ತೆಯಾಗಿದ್ದು, ಇವುಗಳನ್ನು ಮೊಜಿಲ್ಲಾ ಫೈರ್‌ಫಾಕ್ಸ್ ಬಗೆಹರಿಸಿದೆ. ಈ ದೌರ್ಬಲ್ಯಗಳು ರಿಮೋಟ್ ದಾಳಿಕೋರರಿಗೆ ಸೂಕ್ಷ್ಮ ಮಾಹಿತಿಯನ್ನು ಬಹಿರಂಗಪಡಿಸಲು ಭದ್ರತಾ ನಿರ್ಬಂಧಗಳನ್ನು ಬೈಪಾಸ್ ಮಾಡಲು, ಅನಿಯಂತ್ರಿತ ಕೋಡ್ ಕಾರ್ಯಗತಗೊಳಿಸಲು, ಸ್ಪೂಫಿಂಗ್ ದಾಳಿಗಳನ್ನು ನಡೆಸಲು ಮತ್ತು ಉದ್ದೇಶಿತ ವ್ಯವಸ್ಥೆಯ ಮೇಲೆ ಸೇವೆಯ ನಿರಾಕರಣೆ (ಡಿಒಎಸ್) ದಾಳಿಗಳನ್ನು ಉಂಟು ಮಾಡಲು ಅನುವು ಮಾಡಿಕೊಟ್ಟಿದೆ.

ಸಿಇಆರ್‌ಟಿ–ಇನ್ ಪ್ರಕಾರ, ಹ್ಯಾಕರ್‌ಗಳ ಕಾರಣದಿಂದಾಗಿ ಬಳಕೆದಾರರ ಮಾಹಿತಿ ವ್ಯವಸ್ಥೆಗಳು, ಡಿವೈಸ್‌ಗಳನ್ನು ಪ್ರವೇಶಿಸಲು ಸಾಧ್ಯವಾಗದಿದ್ದಾಗ ಸೇವೆಯ ನಿರಾಕರಣೆ (DoS) ಮಾಡಲಾಗುತ್ತದೆ. ಇಂತಹ ದಾಳಿಗಳನ್ನು ಬಳಸಿಕೊಂಡು ಬಳಕೆದಾರರ ಇಮೇಲ್, ವೆಬ್‌ಸೈಟ್‌ಗಳು, ಆನ್‌ಲೈನ್ ಖಾತೆಗಳನ್ನು ಹ್ಯಾಕ್ ಮಾಡುವುದು ಸುಲಭವಾಗಲಿದೆ ಎಂದು ಹೇಳಿದೆ. ■




ಮೆಸೇಜಿಂಗ್ ಆ್ಯಪ್ 'ವಾಟ್ಸಾಪ್'ಗೆ ಸೆಡ್ಡುಹೊಡೆಯುತ್ತಿರುವ 'ಟೆಲಿಗ್ರಾಮ್' ತನ್ನ 'ಫ್ರೀ ಫಾರೆವರ್' ಎಂಬ ಟ್ಯಾಗ್ ಲೈನ್ ಕೈಬಿಡಲು ಸಿದ್ಧತೆ ನಡೆಸುತ್ತಿದ್ದು, ಭವಿಷ್ಯದಲ್ಲಿ ತರಲಿಚ್ಛಿಸಿರುವ 'ಟೆಲಿಗ್ರಾಮ್ ಪ್ರೀಮಿಯಂ' ವರ್ಷನ್ ಬಳಕೆಗೆ ಹಣ ವಿಧಿಸಲಿದೆ.

ಬಹುಶಃ ಜೂನ್ ತಿಂಗಳಿನಿಂದ ಟೆಲಿಗ್ರಾಮ್ ಪ್ರೀಮಿಯಂ ವರ್ಷನ್ ಟೆಲಿಗ್ರಾಂ ಆ್ಯಪ್‌ನಲ್ಲಿ ಕಾಣಿಸಿಕೊಳ್ಳಲಿದ್ದು, ಈ ವರ್ಷನ್ ಬಳಕೆಗೆ ಚಂದಾದಾರಿಕೆ ಯೋಜನೆಯನ್ನು ಶುರು ಮಾಡಲಿದೆ. ಅದಕ್ಕಾಗಿ ಬಳಕೆದಾರರು ಹಣ ಪಾವತಿಸಬೇಕಾಗುತ್ತದೆ ಎಂದು ವರದಿಯಾಗಿದೆ. ಇದಕ್ಕೆ ಪೂರಕವೆಂಬಂತೆ ಈಚೆಗೆ, 'ಟೆಲಿಗ್ರಾಮ್ ಆ್ಯಪ್‌ನಲ್ಲೇ ಪ್ರೀಮಿಯಂ ವರ್ಷನ್ ಪರಿಚಯಿಸುತ್ತಿದ್ದು, ಇದನ್ನು ಸಬ್‌ಸ್ಕ್ರೈಬ್ ಮಾಡಿಕೊಳ್ಳಬಹುದಾಗಿದೆ' ಎಂದು ಟೆಲಿಗ್ರಾಮ್ ಸಂಸ್ಥಾಪಕ ಪಾವೆಲ್ ಡುರೊವ್ ತಿಳಿಸಿದ್ದರು. ಅಲ್ಲದೆ ತಮ್ಮ ಅಸ್ತಿತ್ವದಲ್ಲಿರುವ ವೈಶಿಷ್ಟ್ಯಗಳನ್ನು ಉಚಿತವಾಗಿ ಇರಿಸಿಕೊಂಡು, ಬಳಕೆದಾರರಿಗೆ ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ಆ್ಯಪ್‌ನಲ್ಲಿ ನೀಡಬೇಕಿದೆ. ಇದಕ್ಕೆ ಇರುವ ಏಕೈಕ ಮಾರ್ಗವೆಂದರೆ ಹೆಚ್ಚಿನ ಸೌಲಭ್ಯಗಳಿಗೆ ಶುಲ್ಕ ವಿಧಿಸುವುದು ಅಂತಲೂ ಅವರು ಹೇಳಿದ್ದರು.

ಪ್ರೀಮಿಯಂ ಬಳಕೆದಾರರಿಗೆ ಚಾಟ್‌ಗಳು, ಮೀಡಿಯಾ ಮತ್ತು ಫೈಲ್ ಅಪ್‌ಲೋಡ್‌ಗೆ ಇರುವ ಮಿತಿಯನ್ನು ಹೆಚ್ಚಿಸಲಾಗುತ್ತದೆ ಎಂಬುದು ಪಾವೆಲ್ ಡುರೊವ್ ಮಾತು. ಸದ್ಯ ಬಳಕೆಯಲ್ಲಿರುವ ಟೆಲಿಗ್ರಾಮ್‌ಗೆ ಯಾವುದೇ ಹಣ ಪಾವತಿಯ ಅವಶ್ಯಕತೆ ಇಲ್ಲ. ಆದರೆ, ಭವಿಷ್ಯದ ಅಪ್‌ಡೇಟ್‌ಗಳಲ್ಲಿ ದೊರೆಯುವ ವಿಶೇಷ ಸೌಲಭ್ಯಗಳಿಗೆ ಹಣವನ್ನು ಪಾವತಿ ಮಾಡಬೇಕಾಗಬಹುದು.

ಈ ಬಗ್ಗೆ ಟ್ವಿಟರ್‌ನಲ್ಲಿ ಪ್ರತಿಕ್ರಿಯಿಸಿರುವ ಡೆವಲಪರ್ ಅಲೆಸ್ಸಾಂಡ್ರೊ ಪಲುಝಿ, 'ಟೆಲಿಗ್ರಾಮ್ ತನ್ನ ಪಾವತಿಸಿದ ಆವೃತ್ತಿಯನ್ನು ಶೀಘ್ರದಲ್ಲೇ ಪ್ರಾರಂಭಿಸಲು ಅಪ್ಲಿಕೇಶನ್‌ನ ಆರಂಭಿಕ ಅಡಿಬರಹವನ್ನು ಬದಲಾಯಿಸುತ್ತಿದೆ ಎಂಬುದು ಮಾಧ್ಯಮಗಳು ಉಲ್ಲೇಖ' ಎಂದಿದ್ದಾರೆ. ಅಲ್ಲದೇ ಅವರು ಹಂಚಿಕೊಂಡಿರುವ ಹೊಸ ಡೇಟಾ ಸ್ಟ್ರಿಂಗ್‌ಗಳು ಹೊಸ ಅಡಿಬರಹವನ್ನು ಒಳಗೊಂಡಿರುವುದನ್ನು ಸೂಚಿಸುತ್ತಿವೆ. ಅವುಗಳಲ್ಲಿ, ಟೆಲಿಗ್ರಾಮ್ ಚಾಟ್‌ಗಳು ಮತ್ತು ಮಾಧ್ಯಮಕ್ಕಾಗಿ ಉಚಿತ ಅನಿಯಮಿತ ಕ್ಲೌಡ್ ಸಂಗ್ರಹಣೆಯನ್ನು ಒದಗಿಸುತ್ತದೆ ಮತ್ತು ಜಾಹೀರಾತುಗಳನ್ನು ತೋರಿಸುವ ಯೋಜನೆಗಳಿವೆ ಎಂಬ ಮಾಹಿತಿಯೂ ಒಳಗೊಂಡಿದೆ. ಪ್ರೀಮಿಯಂನಲ್ಲಿ ಹೆಚ್ಚುವರಿ ಸ್ಟಿಕ್ಕರ್‌ಗಳನ್ನು ಅನ್‌ಲಾಕ್ ಮಾಡುವ ನಿರೀಕ್ಷೆಯೂ ಇದೆ. ■